## ಉಗಾಂಡಾ ಉಪಪ್ರಧಾನಿ ಡಾ.ಕಿರುಂದಾ ಬಣ್ಣನೆ | ಬಿವಿವಿ ಪಾಲಿಟೆಕ್ನಿಕ್ ಕಾಲೇಜಿಗೆ ಭೇಟಿ

# ಭಾರತ ಬಿಟ್ಟು ಜಗತ್ತು ವರ್ಣಿಸಲು ಅಸಾಧ್ಯ

■ ವಿಜಯವಾಣಿ ಸುದ್ದಿಜಾಲ ಬಾಗಲಕೋಟೆ

ವಿಶ್ವದ ದೊಡ್ಡ ದೇಶ, ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವ ಭಾರತವನ್ನು ಬಿಟ್ಟು ಜಗತ್ತನ್ನು ವರ್ಣಿಸಲು ಸಾಧ್ಯವೇ ಇಲ್ಲ ಎಂದು ಉಗಾಂಡಾ ದೇಶದ 2ನೇ ಉಪಪ್ರಧಾನಿ ಡಾ. ಕಿರುಂದಾ ಕಿವೆಜಿಂಜಾ ಬಣ್ಣಿಸಿದರು.

ಬಾಗಲಕೋಟೆ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್ ಕಾಲೇಜಿಗೆ ಶನಿವಾರ ಸಂಜೆ ತಮ್ಮ ನೇತೃತ್ವದ ಉನ್ನತ ಮಟ್ಟದ ನಿಯೋಗದೊಂದಿಗೆ ಭೇಟಿ ನೀಡಿದ ವೇಳೆ ಅವರು ವಿಜಯವಾಣಿ ಜತೆಗೆ ಮಾತನಾಡಿ, ಜಗತ್ತನ್ನು ಕಾಡುತ್ತಿರುವ ಭಯೋತ್ಪಾದನೆ ನಿರ್ಮೂಲನೆ ನಿಟ್ಟಿನಲ್ಲಿ ಉಗಾಂಡ ದೇಶದ ಕ್ರಮವೇನು ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಭಾರತ ಅತ್ಯಂತ ದೊಡ್ಡ ದೇಶವಾಗಿದೆ. ಆರ್ಥಿಕ ವ್ಯವಸ್ಥೆಯಲ್ಲಿ 5ನೇ ಸ್ಥಾನದಲ್ಲಿದೆ. ಹೀಗಾಗಿ ಈ ದೇಶವನ್ನು ಬಿಟ್ಟು ಜಗತ್ತನ್ನು ವರ್ಣಿಸಲು ಸಾಧ್ಯವಿಲ್ಲ ಎನ್ನುವ ಮೂಲಕ ಭಾರತದ ಶಕ್ತಿಯನ್ನು ಗುಣಗಾನ ಮಾಡಿದರು.

ಉಗಾಂಡಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದ ಡಾ.ಕಿರುಂದಾ ಕಿವೆಜಿಂಜಾ, ಭವಿಷ್ಯದಲ್ಲಿ ಭಾರತ ಮತ್ತು ಉಗಾಂಡ ದೇಶಗಳ ನಡುವೆ ಉತ್ತಮ ಬಾಂಧವ್ಯ ಹೊಂದಲು ಹಲವು ವಿಷಯಗಳ ಕುರಿತು ಭಾರತ ಪ್ರಧಾನಿ ಜತೆ ಚರ್ಚಿಸಲಾಗಿದೆ ಎಂದರು.

ಡಾ.ಕಿರುಂದಾ ನೇತೃತ್ವದ ನಿಯೋಗವನ್ನು ಪ್ರಾಚಾರ್ಯ ಜಿ.ಬಿ.ದಾನಶೆಟ್ಟಿ ಸ್ವಾಗತಿಸಿದರು. ಇಲ್ಲಿನ ಶಿಕ್ಷಣದ ವ್ಯವಸ್ಥೆ, ತಂತ್ರಜ್ಞಾನ, ಬಗ್ಗೆ ಮಾಹಿತಿ ಪಡೆದುಕೊಂಡು ತಮ್ಮ ದೇಶದಲ್ಲಿ ಇರುವ ಶಿಕ್ಷಣದ ವ್ಯವಸ್ಥೆಯಲ್ಲಿ ಸೇರಿಸಿಕೊಳ್ಳುವ ನಿಟ್ಟಿನಲ್ಲಿ ಉಗಾಂಡ ನಿಯೋಗ ಭಾರತ ಪ್ರವಾಸ ಕೈಗೊಂಡಿದೆ. ಬಾಗಲಕೋಟೆ ಬಿವಿವಿ ಸಂಘದ ಡಿಪ್ಲೊಮಾ ಕಾಲೇಜಿಗೆ ಪ್ರಥಮವಾಗಿ ನಿಯೋಗ ಭೇಟಿ ಮಾಡಿ ವಿವಿಧ ಕೋರ್ಸ್‌ಗಳ ಮಾಹಿತಿ ಪಡೆದುಕೊಂಡಿತು. ನಿಯೋಗದಲ್ಲಿ ಉಪಪ್ರಧಾನಿ ಜತೆಗೆ ಯೋಜನಾ ಉಪ ಮುಖ್ಯಸ್ಥ ಕೆಜಾಲ್

ವಿಜಯವಾಣಿ ಚಿತ್ರ



ಬಾಗಲಕೋಟೆ ಬಿವಿವಿ ಸಂಘದ ಪಾಲಿಟೆಕ್ನಿಕ್ ಕಾಲೇಜಿಗೆ ಶನಿವಾರ ಸಂಜೆ ಭೇಟಿ ನೀಡಿದ ಉಗಾಂಡಾ ದೇಶದ 2ನೇ ಉಪಪ್ರಧಾನಿ ಡಾ.ಕಿರುಂದಾ ಕಿವೆಜಿಂಜಾ ನೇತೃತ್ವದ ಉನ್ನತ ಮಟ್ಟದ ನಿಯೋಗಕ್ಕೆ ವಿವಿಧ ಕೋರ್ಸ್‌ಗಳ ಬಗ್ಗೆ ಪ್ರಾಚಾರ್ಯ ಜಿ.ಬಿ. ದಾನಶೆಟ್ಟಿ ಮಾಹಿತಿ ನೀಡಿದರು. ಕಾಲೇಜಿನ ಪ್ರಾಧ್ಯಾಪಕರು ಇದ್ದರು.

> ಭಾರತ ದೇಶದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅಳವಡಿಸಿಕೊಂಡಿರುವ ಕೌಶಲ, ತಂತ್ರಜ್ಞಾನ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿಕೊಂಡು ನಮ್ಮ ದೇಶದ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಹೇಗೆಲ್ಲ ಅಳವಡಿಸಿಕೊಳ್ಳಬಹುದು ಎನ್ನುವ ಮುಖ್ಯ ಉದ್ದೇಶದೊಂದಿಗೆ ಇಲ್ಲಿಗೆ ಭೇಟಿ ನೀಡಿದ್ದೇವೆ.
>
> | ಡಾ.ಕಿರುಂದಾ ಕಿವೆಜಿಂಜಾ ಉಪಪ್ರಧಾನಿ, ಉಗಾಂಡಾ

» ಭವಿಷ್ಯದಲ್ಲಿ ಭಾರತದ ಜತೆಗೆ ಉತ್ತಮ ಸಂಬಂಧ ವೃದ್ಧಿ

» ಪ್ರಧಾನಿ ನರೇಂದ್ರ ಮೋದಿ ಉಗಾಂಡಾ ಭೇಟಿಗೆ ಮೆಚ್ಚುಗೆ

ವಿಜಯವಾಣಿ ಚಿತ್ರ



ಬಾಗಲಕೋಟೆ ಬಿವಿವಿ ಸಂಘದ